ಗೋದಾಮಿನಲ್ಲಿ ಅಲ್ಲೋಲಕಲ್ಲೋಲ ವಾತಾವರಣ...

ಗೋದಾಮಿನ ಬಳಿ ಹಲವಾರು ಜನರು ಸೇರಿದ್ದರು. ಆ ಹಳ್ಳಿಯಲ್ಲಿ ನಡೆದ ಮೊದಲ ಕಳವಿನ ಘಟನೆಯದು. ಅದೂ ಸಾರ್ವಜನಿಕ ರಸ್ತೆ ಹಾಗೂ ಸೇತುವೆಯ ನಿರ್ಮಾಣ ಕಾಮಗಾರಿಗೆ ಸಂಬಂಧಿಸಿದ ವಸ್ತುವಿನ ಕಳ್ಳತನ. ಸ್ವಲ್ಪ ಹೊತ್ತಿನಲ್ಲಿಯೇ ಗುತ್ತಿಗೆದಾರನೂ ಅಲ್ಲಿಗೆ ಆಗಮಿಸಿದ. ಆತನ ಕೋಪ ನೆತ್ತಿಗೇರಿತ್ತು. ಕೆಳಕ್ಕೆ ಬಿದ್ದಿದ್ದ ಕಿಟಕಿಯನ್ನು ದಿಟ್ಟಿಸುತ್ತಲೇ ಬುಂಡುವಿನ ಮೇಲೆ ಕೋಪವನ್ನು ಪ್ರದರ್ಶಿಸಿದ.

''ರಾತ್ರಿ ಎಲ್ಲಿಗೆ ಹೋಗಿದ್ದೆ? ಇಲ್ಲೇ ಮಲಗಿ ಕಾಯೋದಿಕ್ಕೆ ಆಗಲ್ವಾ? ಸಂಬಳ ಮಾತ್ರ ಸರಿಯಾಗಿ ಬಂದುಬಿಡಬೇಕು; ಕೆಲಸ ಯಾರಿಗೂ ಬೇಡ...''

ಆತನೆದುರು ಅರ್ಧ ಬಾಗಿದ ಸ್ಥಿತಿಯಲ್ಲಿ ನಿಂತು ಬುಂಡು ಹೇಳಿದ, ''ಇಲ್ಲ ನನ್ನೊಡೆಯ, ಇದೇ ಮೊದಲ ಬಾರಿ, ಈ ಹಳ್ಳಿಯಲ್ಲಿ ಕಳ್ಳತನವಾಗಿರುವುದು. ಇನ್ನು ಮುಂದೆ ಕಣ್ಣಲ್ಲಿ ಕಣ್ಣಿಟ್ಟು ಗೋದಾಮು ಕಾಯುತ್ತೇನೆ...''

ಗುತ್ತಿಗೆದಾರನ ಬೈಗುಳ, ಜೀವನವೇ ಸಾಕು ಎನ್ನುವಷ್ಟರ ಮಟ್ಟಿಗಿನ ಬೇಸರದ ನಡುವೆಯೂ ಬುಂಡುವಿನ ಸಮಜಾಯಿಷಿ, ಸುತ್ತ ನೆರೆದವರ ಕುತೂಹಲ ಮುಂದುವರೆದೇ ಇತ್ತು. ನಾಲ್ಕಾರು ತಾಸು ಕಳೆದ ನಂತರ ಪೊಲೀಸ್ ಅಧಿಕಾರಿ ಹಾಗೂ ಪೇದೆಯ ಆಗಮನ. ಅವರು ಬಹಳ ದೂರದ ಠಾಣೆಯಿಂದ ಆಗಮಿಸಿದ್ದ. ಅಧಿಕಾರಿ ಅಲ್ಲಿದ್ದ ಎಲ್ಲರ ವಿಚಾರಣೆ ನಡೆಸಿದ.

''ನಮ್ಮೂರಲ್ಲಿ ಯಾವತ್ತೂ ಕಳ್ಳತನ ನಡೆದಿಲ್ಲ ಸಾಹೇಬರೇ...'' ಧೈರ್ಯ ತಂದುಕೊಂಡು ಹೇಳಿದ್ದರು ಗ್ರಾಮಸ್ಥರು.

